**CC 896/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 896/2022**

**ಸಿ ಡಬ್ಲ್ಯೂ -3**
**ಪಿ ಡಬ್ಲ್ಯೂ -1**

| | |
|---|---|
| **ಸಾಕ್ಷಿಯ ಹೆಸರು -** | **ದಾದಾ ಬಾಷಾ** |
| **ತಂದೆಯ ಹೆಸರು -** | **ಅಬ್ದುಲ್ ನಬೀ** |
| **ವಯಸ್ಸು -** | **48 ವರ್ಷಗಳು** |
| **ಉದ್ಯೋಗ -** | **ಚಾಲಕ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಮತ್ತು ಜಪ್ತು ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **1**(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು **2022** ರಲ್ಲಿ ನಾನು ಸ್ವಂತ ಕೆಲಸದ ಮೇಲೆ ಠಾಣೆಗೆ ಹೋದಾಗ ಮಾಡಿರುತ್ತೇನೆ. ನಿಪಿಃ **1** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 16-12-2021 ರಂದು ಪೋಲಿಸರು ನನ್ನನ್ನು ಮತ್ತು ಚಾಸಾ -2 ರವರನ್ನು ಹೊಸಪೇಟೆಯ ಸೋಗೆ ಮಾರಾಕಟ್ಟೆ ಹತ್ತಿರ ಸಂಜೆ 6.30 ಗಂಟೆಗೆ ಕರೆದುಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ಪಶು ಆಸ್ಪತ್ರೆಯ ಕಂಪೌಂಡ್ ಪಕ್ಕದಲ್ಲಿ ನಿಂತು ನೋಡಿದಾಗ 4 ಜನ ಮಟಕಾ ಜೂಜಾಟ ಆಡುತ್ತಿರುವುದು ಕಂಡುಬಂದಿತು ಅಂದರೆ ಸರಿಯಲ್ಲ. ನಾವು ನಮ್ಮ ಸಮಕ್ಷಮ ದಾಳಿ ಮಾಡಿ 3 ಜನರನ್ನು ಹಿಡಿಯಲಾಗಿತ್ತು ಅಂದರೆ ಸರಿಯಲ್ಲ. 4 ನೇ ವ್ಯಕ್ತಿ ಸ್ಥಳದಲ್ಲಿ ಒಟ್ಟು ರೂ. 4000/- ಗಳನ್ನು ಎಸೆದು ಹೋಗಿದ್ದ ಅಂದರೆ ಸರಿಯಲ್ಲ. ಸದರಿ ಆರೋಪಿಯ ಹೆಸರು ಅಲ್ಲಾಭಕ್ಷಿ ಎಂದು ಸ್ಥಳದಲ್ಲಿದ್ದ ಮೊಹಮ್ಮದ್ ರಫೀಕ್ ಎಂಬ ಆರೋಪಿ ತಿಳಿಸಿದ್ದ ಅಂದರೆ ಸರಿಯಲ್ಲ. 1 ನೇ ಆರೋಪಿಯನ್ನು ವಿಚಾರಿಸಿದಾಗ ಆತನ ಹೆಸರು ಪಿ ಮೊಹಮ್ಮದ್ ಗೌಸ್ ಎಂದು ತಿಳಿಸಿದ . ಆತನ ಬಳಿ ರೂ. 19100/- ಮತ್ತು ಒಂದು ಮೊಬೈಲ್ ದೊರೆತವು ಅಂದರೆ ಸರಿಯಲ್ಲ. 2 ನೇ ಆರೋಪಿಯನ್ನು ವಿಚಾರಿಸಿದಾಗ ತನ್ನ ಹೆಸರು ರವಿ ಎಂದು ಮತ್ತು ಆತನ ಬಳಿ ರೂ. 4800/- ಮತ್ತು ಮೊಬೈಲ್ ಫೋನ್ ದೊರೆತವು ಅಂದರೆ ಸರಿಯಲ್ಲ. 3 ನೇ ಆರೋಪಿಯನ್ನು ವಿವಚಾರಿಸಿದಾಗ ತನ್ನ ಹೆಸರು ಮೊಹಮ್ಮದ್ ರಫೀಕ್ ಎಂದು, ಆತನ ಬಳಿ ರೂ. 5200/-, ಮಟಕಾ ನೋಟ್ ಪುಸ್ತಕ ಮತ್ತು ಬಾಲ್ ಪೆನ್ನು ಹಾಗೂ ಒಂದು ಮೊಬೈಲ್ ಫೋನ್ ದೊರೆತವು ಅಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಮ್ಮ ಸಮಕ್ಷಮ ನಿಪಿಃ 1 ರಂತೆ ಜಪ್ತು ಪಂಚನಾಮೆ ಮಾಡಿ ವಶಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸ್ಥಳದಲ್ಲಿ ಇದ್ದರು ಅಂದರೆ ಸರಿಯಲ್ಲ.

ನನ್ನ ಸಮಕ್ಷಮ ಪಂಚನಾಮೆ ಆಗಿದ್ದರೂ, ಆರೋಪಿತರನ್ನು ಗುರುತಿಸಲು ಸಾಧ್ಯವಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಎಂ ಕೆ ವಕೀಲರಿಂದಃ** ಇಲ್ಲಾ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.